ಮದುಮಗನಿಗೆ ಕುದುರೆ ನೋಡುತ್ತಿದ್ದಂತೆಯೇ ಮನಸ್ಸು ತಡೆಯಲಿಲ್ಲ. ದೊಡ್ಡಣ್ಣನನ್ನು ಕರೆದು 'ಕುದುರೆ ಮಾಲೀಕನಿಗೆ ಖರ್ಚನ್ನು ನಾನು ಕೊಡುತ್ತೇನೆ. ಊರ ತುಂಬಾ ಸುತ್ತಾಡಿಸಲು ಹೇಳು' ಎಂದು ತನ್ನ ಬಯಕೆ ಹೇಳಿದ.

ನವರಂಗ್ ಬಾಜಾ, ಮದುಮಗನ ಸ್ನೇಹಿತರ ಅಲಬರಿ ಕುಣಿತ, ಕುದುರೆಯ ಗೆಜ್ಜೆಗಳ ಸದ್ದು, ಅದನ್ನು ಹಾರಿಸಲು ಕುದುರೆ ಮಾಲೀಕ ಹಜರತ್ತಯ್ಯನ ದುಡಿಯ ಸದ್ದು, ಮತ್ತೇರಿಸುವ ಹಾಡುಗಳು.

ಒಂದು ಗಂಟೆಯಂದುಕೊಂಡಿದ್ದ ಮೆರವಣಿಗೆ ಎರಡು ತಾಸು ಹಿಡಿಯಿತು. ವಿಪರೀತ ಬಿಸಿಲು-ಬೆವರು. ಎಷ್ಟು ಸೋಡಾ ಕುಡಿದರೂ ತೀರದ ಬಾಯಾರಿಕೆ. ಎಲ್ಲ ಮುಗಿಸಿಕೊಂಡು ನಿಖಾ ನಡೆಯುವ ಮದುಮಗಳ ಮನೆಗೆ ಬರುವಷ್ಟರಲ್ಲಿ ಎಲ್ಲರ ಮೈ ಹುಣಸೇ ಹಣ್ಣಾಗಿತ್ತು. ಮುಖಗಳು ನಿಸ್ತೇಜಗೊಂಡಿದ್ದವು. ಮದುಮಗನಿಗಾದರೆ ಬಾಯಿಯಿಂದ ಮಾತು ಹೊರಡಲಿಲ್ಲ. ವಿಪರೀತ ಸುಸ್ತಾಗಿದ್ದ.

ನಿಖಾ ಮುಗಿಯುತ್ತಲೇ ಖಾಜಿ ಬೊಗಸೆಯಲ್ಲಿ ಕಲ್ಲುಸಕ್ಕರೆಯನ್ನು ತೆಗೆದು ಮದುಮಗನ ತಲೆಯ ಮೇಲಿಂದ ಜನರತ್ತ ಬೀಸುವಷ್ಟರಲ್ಲಿ ಸಮಯ ಎರಡು ಗಂಟೆಯಾಗಿತ್ತು. ಕಲ್ಲುಸಕ್ಕರೆ ಕಡೆ ಕಣ್ಣೆತ್ತಿ ಕೂಡಾ ನೋಡದೇ ಜನ ಸರಸರನೆ ಕುಳಿತಿದ್ದ ಕುರ್ಚಿಗಳನ್ನು ಟೇಬಲ್ಲುಗಳನ್ನು ಎಳೆದುಕೊಂಡುಬಿಟ್ಟರು. ಕುರ್ಚಿ ಸಿಗದವರು ಶಾಮಿಯಾನ ಕೆಳಗೆ ಬಂದು ನಿಂತುಬಿಟ್ಟರು.

ಮೊದಲ ಪಂಕ್ತಿಯಲ್ಲಿ ಉಣದೇ ಇದ್ದರೆ 'ಪೀಸುಗಳು ಹೋದಂಗೆನಯ್ಯ' ನಗುನಗುತ್ತಲೇ ಭುಜದ ಮೇಲಿನ ಶಲ್ಯವನ್ನು ಸರಿಪಡಿಸಿಕೊಳ್ಳುತ್ತಾ ಯಜಮಾನರೊಬ್ಬರು ನಿರಾಸೆಯಿಂದ ಉಸುರಿದರು. ಎರಡನೆಯ ಪಂಕ್ತಿಯಲ್ಲಾದರೂ ಜಾಗವನ್ನು ಹೊಡೆಯಬೇಕೆಂದು ಕೆಲವರು ಪಂಕ್ತಿಯಲ್ಲಿ ಕೂತು ಉಣ್ಣುತ್ತಿದ್ದವರ ಹಿಂದೆಯೇ ನಿಂತುಬಿಟ್ಟರು.

ಮದುಮಗ 'ಕಾವಲಿ'ಯಲ್ಲಿ ಚಿನ್ನದ ಕೆಲಸ ಮಾಡುತ್ತಾನೆ. ಒಳ್ಳೆಯ ಕೆಲಸಗಾರ. ಅಕ್ಕಸಾಲಿಗರ ಬೀದಿಯಲ್ಲಿ ಎಲ್ಲರಿಗೂ ಬೇಕಾದ ಹುಡುಗ. ಆದ್ದರಿಂದಲೇ ಅವನಿಗೆ ಗೆಳೆಯರಾಗದವರು ಯಾರೂ ಇಲ್ಲ. ಅವರೆಲ್ಲರೂ ಮದುವೆಗೆ ಕಡ್ಡಾಯ ಹಾಜರಾಗಬೇಕೆಂದು ನಿಖಾ ಭಾನುವಾರ ಇಡಿಸಿದ್ದಾನೆ. ಭಾನುವಾರ ರಜಾ ದಿನವಾದ್ದರಿಂದ 'ಕಾವಲಿ'ಯಿಂದ 'ಬಿಟ್ರಗುಂಟ' ಕೇವಲ ಹದಿನೈದು ಕಿಲೋಮೀಟರುಗಳಾದ್ದರಿಂದ ಊಹಿಸಿದ್ದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಜನ ಬಂದುಬಿಟ್ಟರು. ಯಾವತ್ತೂ ಮದುವೆಗಳಿಗೆ ಹೊರಡದ ಕೆಲವು ಅಕ್ಕಸಾಲಿಗರ ಬೀದಿಯ ದೊಡ್ಡದೊಡ್ಡ ಕೆಲಸ ಮಾಡುವವರು ಕೂಡಾ ಸಮಯ ಹೊಂದಿಸಿಕೊಂಡು ಹೊಸ ಪಂಚೆಗಳನ್ನು ಉಟ್ಟುಕೊಂಡು ಬಂದೇ ಬಿಟ್ಟಿದ್ದರು. ಮದುಮಗಳ ಕಡೆಯವರ ದುರದೃಷ್ಟಾನೋ ಏನೋ ಜಗಳ ಮಾಡಿಕೊಂಡು ಬೇರೆಯಾದವರು, ಮಾತುಬಿಟ್ಟವರು, ಮದುವೆ ದೂರವಾಗುತ್ತದೆ ಎಂದು ಸಬೂಬು ಹೇಳುವವರು ಕೂಡಾ ಮಕ್ಕಳು-ಮರಿಗಳೊಂದಿಗೆ ಮದುವೆಗೆ ಬಂದೇ ಬಿಟ್ಟಿದ್ದರು.

ಅವರೆಲ್ಲರನ್ನು ನೋಡುತ್ತಿದ್ದಂತೆ ಮದುಮಗಳ ತಂದೆ ಷರೀಫರಿಗೆ ಜೀವ ಹಾರಿ ಹೋದಂತಾಯಿತು. ಪಲಾವು ತಯಾರಿಸಿದ್ದು ಮುನ್ನೂರು ಜನರಿಗೆ. ಈಗ ನೋಡಿದರೆ ನಾನ್ನೂರು ಜನ ಲೆಕ್ಕ ತೇಲುತ್ತಿದೆ. ಏನು ಮಾಡಲು ತೋಚಲಿಲ್ಲ ಅವರಿಗೆ. ದೂರದಲ್ಲಿದ್ದ ಮರವೊಂದರ ಕೆಳಗೆ ಯೋಚಿಸುತ್ತಾ ಕುಳಿತುಕೊಂಡರು.

ಈಗ ಈ ಕಷ್ಟದಿಂದ ಪಾರು ಮಾಡುವ ಜವಾಬ್ದಾರಿ ಮದುಮಗಳ ಸೋದರ ಮಾವನಾದ ಅಸ್ಲಾಮ ತೆಗೆದುಕೊಂಡ. ಅಸ್ಲಾಮನಿಗೆ ಇದು ಸ್ವಂತ ಮಗಳ ಮದುವೆ ಸಮಾನ. ಅವನಿಗೆ ಹೆಣ್ಣುಮಕ್ಕಳಿಲ್ಲ. ಆದ್ದರಿಂದ ಅಕ್ಕನ ಮಗಳನ್ನು ತನ್ನ ಮಗಳೆಂದು ಕೊಂಡಿದ್ದಾನೆ. ಅಕ್ಕಬಾವಂದಿರಿಗಿಂತ ಚಿಕ್ಕಂದಿನಿಂದ ಮಗುವನ್ನು ತಾನೇ ಹೆಚ್ಚಾಗಿ ಪ್ರೀತಿಯಿಂದ ಬೆಳೆಸಿದ್ದ. ಈಗ ಈ ಮದುವೆಯಲ್ಲಿ ಅವರ ಮಾತು ಬೀಳುವುದು ಅವನಿಗಿಷ್ಟವಿರಲಿಲ್ಲ. 'ಬಾವಾ ನೀವು ದಿಗಿಲು ಪಡಬೇಡಿ. ಇಂಥದ್ದೇನಾದರೂ ನಡೆಯ ಬಹುದೆಂದು ಬೆಳಗ್ಗೆ ಟಗರುಗಳನ್ನು ಕೊಯ್ಸಿಸಿದ ಮೇಲೆ ತಲೆ, ಕಾಲುಗಳನ್ನು ಸಪರೇಟು ಕೊಯ್ದು ಇಟ್ಟದೀನಿ. ಈಗ ಆ ಪಲ್ಯೆ ಒಲೆ ಮೇಲಿದೆ. ಇನ್ನೊಂದು ಒಲೆಯ ಮೇಲೆ ಹತ್ತು ಕೆ.ಜಿ. ಅಕ್ಕಿ ಕುದೀತಾ ಇದೆ. ಅನ್ನ ಆಗ್ತಿದ್ದಂತೆ ತೆಗೆದು ಪಾಲಾವ್‌ನಲ್ಲಿ ಮಿಕ್ಸಿಂಗ್ ಮಾಡಿ